# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ–684/2017

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ: 15.3.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಪಾವಗಡ ತಾಲ್ಲೂಕು, ಅರಸೀಕೆರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಖಾತೆ ಸಂ.62/104, 105 ರಲ್ಲಿ **ಯರಗುಂಟಪ್ಪ ಅವರು ಮನೆ ಕಟ್ಟುವುದರ ಮೂಲಕ ತಡೆಯೊಡ್ಡಿರುವ ಚರಂಡಿಯನ್ನು ಪುನರ್ ನಿರ್ಮಿಸಿ, ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯನ್ನು ನಿವಾರಿಸಲು, ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ** ಬಗ್ಗೆ.

*******

ಶ್ರೀ. ಎಂ. ಗಂಗಾಧರಪ್ಪ, ಅರಸೀಕೆರೆಯ ನಿವಾಸಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ. ಅಂಚೆನಾಳಕರ್, ಕಾರ್ಯದರ್ಶಿ, ಅರಸೀಕೆರೆ ಗ್ರಾಮ ಪಂಚಾಯತ್, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ, (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಹಣದ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರಾದ ಶ್ರೀ ಎಂ.ಗಂಗಾಧರಪ್ಪ, ಅರಸೀಕೆರೆಯ ನಿವಾಸಿ, ಪಾವಗಡ ತಾಲ್ಲೂಕು, ಇವರು ತಮ್ಮ ದೂರಿನಲ್ಲಿ, ಪಾವಗಡ ತಾಲ್ಲೂಕು, ಅರಸೀಕೆರೆ ಗ್ರಾಮದ ಶ್ರೀ ಗುಜ್ಜಾರ್ ಆಂಜನೇಯಸ್ವಾಮಿ ಬೀದಿಯಲ್ಲಿರುವ ಖಾತೆ ಸಂ.62/104, 105 ರಲ್ಲಿ ಎರಗುಂಟಪ್ಪ ಎನ್ನುವವರು

ಮನೆ ಕಟ್ಟಿಕೊಳ್ಳುತ್ತಿದ್ದಾರೆ. ಆದರೆ ಇವರು ಬೀದಿಯಲ್ಲಿರುವ ಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸುತ್ತಿದ್ದಾರೆ. ಈ ಕಾಲುವೆಯನ್ನು ಒತ್ತುವರಿ ಮಾಡಿರುವದರಿಂದ ಮಳೆ ನೀರು, ಕೊಳಚೆ ನೀರು ಮುಂದೆ ಸಾಗದೆ ಈ ಭಾಗದಲ್ಲಿ ನೀರು ನಿಂತು ರೋಗರುಜಿನಗಳು ಹರಡುತ್ತಿವೆ. ಇದನ್ನು ತಡೆಗಟ್ಟಿ ಒತ್ತುವರಿಯನ್ನು ತೆರವುಗೊಳಿಸಬೇಕೆಂದು ಎದುರುದಾರರಿಗೆ ಹಾಗೂ ಅವರ ಮೇಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದರೂ ಸಹಾ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ದ ಸೂಕ್ತ ಕ್ರಮಕೈಗೊಂಡು ಒತ್ತುವರಿಯನ್ನು ತೆರವುಗೊಳಿಸಬೇಕೆಂದು ದೂರು ಸಲ್ಲಿಸಿರುತ್ತಾರೆ. ದೂರಿನ ಜೊತೆಗೆ ಯರಗುಂಟಪ್ಪ ಅವರ ಹಳೆಯ ಮನೆಯ ಗೋಡೆಯ ಮತ್ತು ಚರಂಡಿಯ ಫೋಟೋ ಹಾಗೂ ಹೊಸದಾಗಿ ಕಟ್ಟುತ್ತಿರುವ ಕಟ್ಟಡದ ಹಾಗೂ ಚರಂಡಿಯ ಫೋಟೋವನ್ನು ಹಾಜರುಪಡಿಸಿರುತ್ತಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಪಾವಗಡ ಪಾವಗಡ ತಾಲ್ಲೂಕು, ಅರಸೀಕೆರೆ ಗ್ರಾಮದ ಶ್ರೀ ಗುಜ್ಜಾರ್ ಆಂಜನೇಯಸ್ವಾಮಿ ಬೀದಿಯಲ್ಲಿರುವ ಖಾತೆ ಸಂ.62/104, 105 ರಲ್ಲಿ ಎರಗುಂಟಪ್ಪ ಎನ್ನುವವರ ಹೆಸರಿಗೆ ಖಾತೆಯಿದ್ದು, ಸದರಿಯವರು ಕಂದಾಯವನ್ನು ಗ್ರಾಮ ಪಂಚಾಯತಿಗೆ ಕಟ್ಟುತ್ತಿದ್ದಾರೆ. ಇವರ ಮೇಲ್ಕಂಡ ಆಸ್ತಿಗೆ ಸಂಬಂಧಿಸಿದಂತೆ ಪಂಚಾಯತಿಯಲ್ಲಿ ಉದ್ದ-ಅಗಲ, ಚೆಕ್ಕುಬಂದಿ ವಿವರ ಲಭ್ಯವಿರುವುದಿಲ್ಲ. ಸರ್ಕಾರಿ ಗ್ರಾಂಠಣ ಜಾಗಕ್ಕೆ ಸಂಬಂಧಿಸಿದಂತೆ ಆಸ್ತಿ ವಹಿ, ಆಸ್ತಿ ವಿಸ್ತೀರ್ಣದ ರಿಜಿಸ್ಟರ್, ಗ್ರಾಮ ಪಂಚಾಯತಿ ಕಛೇರಿಯಲ್ಲಿ ಲಭ್ಯವಿರುವುದಿಲ್ಲ. ಹೀಗಾಗಿ ಕಛೇರಿಯಲ್ಲಿ ಸಮರ್ಪಕ ದಾಖಲೆಗಳು ಲಭ್ಯವಿಲ್ಲದ ಕಾರಣ ಯರಗುಂಟಪ್ಪ ಅವರ ಆಸ್ತಿಯ ಕುರಿತು ಕ್ರಮವಹಿಸಲು ಸಾಧ್ಯವಾಗಿಲ್ಲ. ಸ್ಥಳೀಕರನ್ನು ವಿಚಾರಿಸಲಾಗಿ ಯರಗುಂಟಪ್ಪ ಅವರು ವಂಶಪಾರಂಪರಿಕವಾಗಿ ಸದರಿ ಖಾತೆಯ ಜಾಗವನ್ನು ಉಪಯೋಗಿಸುತ್ತಿರುವುದು ಕಂಡುಬಂದಿರುತ್ತದೆಂದು ತಿಳಿಸಿರುತ್ತಾರೆ. ಮುಂದುವರೆದು, ದೂರುದಾರರು ದೂರು ನೀಡಿದ ನಂತರ ತಾವು ಅಧ್ಯಕ್ಷರೊಂದಿಗೆ 2 ಬಾರಿ ಯರಗುಂಟಪ್ಪ ಅವರನ್ನು ಭೇಟಿಯಾಗಿ ಮನೆ ನಿರ್ಮಿಸುತ್ತಿರುವುದರಿಂದ ಚರಂಡಿ ಮುಚ್ಚಿಹೋಗುತ್ತಿದ್ದು, ಅಕ್ಕಪಕ್ಕದ ಕುಟುಂಬಗಳಿಗೆ ಚರಂಡಿಯ ನೀರು, ಮಳೆಯ ನೀರು, ಮನೆಯೊಳಗೆ ನುಗ್ಗಿ ಕಲುಷಿತ ವಾತಾವರಣ ನಿರ್ಮಾಣವಾಗಿ

ಸಾರ್ವಜನಿಕರಿಗೆ ರೋಗ-ರುಜಿನಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆಂದು ತಿಳಿಹೇಳಿರುವುದಾಗಿಯೂ, ಆ ಸಮಯದಲ್ಲಿ ಯರಗುಂಟಪ್ಪ ಅವರು ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿಯೂ, ತಮ್ಮ ಸ್ವಂತ ಖರ್ಚಿನಿಂದ ಚರಂಡಿ ನಿರ್ಮಿಸಿ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡುವುದಾಗಿ ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಅಲ್ಲದೆ ಯರಗುಂಟಪ್ಪ ಅವರ ಅರ್ಜಿಯ ಮೇರೆಗೆ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಮನೆ ಕಟ್ಟಲು ಅನುಮತಿ ಪತ್ರ ಕೊಡುವ ಬಗ್ಗೆ ನಿರ್ಣಯವಾದರೂ ತಾವು ಇದುವರೆಗೂ ಯರಗುಂಟಪ್ಪ ಅವರಿಗೆ ಮನೆ ನಿರ್ಮಾಣಕ್ಕೆ ಅನುಮತಿ ಕೊಟ್ಟಿರುವುದಿಲ್ಲವೆಂದು, ತಾವು ಯಾವುದೇ ಕರ್ತವ್ಯಲೋಪವೆಸಗಿಲ್ಲವೆಂದು, ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯೊಂದಿಗೆ ಖಾತೆ ನಂ.62/104, 105 ನೇದರ ಖಾತಾ ನಕಲಿನ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಎದುರುದಾರರು ಅನುಮತಿ ಕೊಟ್ಟಿಲ್ಲವೆಂದು ಹೇಳಿದ್ದಾರೆ, ಆದರೆ, ಸದರಿ ಯರಗೂಂಟಪ್ಪ ಚರಂಡಿ ಜಾಗ ಸುಮಾರು 10-12 ಅಡಿ ಅತಿಕ್ರಮಿಸಿ ಮನೆ ಕಟ್ಟಿರುತ್ತಾರೆ, ಮುಚ್ಚಳಿಕೆ ಬರೆದುಕೊಟ್ಟಿದ್ದರೂ ಕೇವಲ ಕಾಟಾಚಾರಕ್ಕೆ 6 ಇಂಚು ಆಳದ ಚಿಕ್ಕ ಗಾತ್ರದ ಚರಂಡಿ ನಿರ್ಮಿಸುತ್ತಾರೆ, ಹಳೆಯ ಚರಂಡಿ ಒತ್ತುವರಿ ಮಾಡದಿದ್ದರೆ ಸ್ವಂತ ಹಣದಲ್ಲಿ ಚರಂಡಿ ನಿರ್ಮಿಸುವ ಅಗತ್ಯವಿರಲಿಲ್ಲ, ಇತ್ಯಾದಿಯಾಗಿ ತಿಳಿಸಿ, ಎದುರುದಾರರ ವಿರುದ್ಧ ಕ್ರಮಕೈಗೊಳ್ಳಲು ಕೋರಿರುತ್ತಾರೆ.

5. ಈ ಪ್ರಕರಣದಲ್ಲಿ ಸಲ್ಲಿಸಲಾದ ದೂರು, ಆಕ್ಷೇಪಣೆ, ಪ್ರತ್ಯುತ್ತರ, ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ, ಖಾತಾ ನಕಲಿನಲ್ಲಿ ಅರಸೀಕರೆ ಗ್ರಾಮದ ಖಾತಾ ನಂ.104, 105 ಯರಗುಂಟಪ್ಪ ತಂದೆ ಪರಮೇಶ್ವರಪ್ಪ ಅವರ ಹೆಸರಿನಲ್ಲಿರುತ್ತದೆ. ಈ ಬಗ್ಗೆ ದೂರುದಾರರು ಯಾವುದೇ ತಕರಾರಿರುವುದಿಲ್ಲ. ಎದುರುದಾರರು ಸದರಿ ಗ್ರಾಮದಲ್ಲಿ ಆಸ್ತಿಗಳ ಉದ್ದಳತೆ, ವಿಸ್ತೀರ್ಣದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲವೆಂದು ಆದ್ದರಿಂದ ಯರಗುಂಟಪ್ಪನ ವಿರುದ್ದ ಕ್ರಮಕೈಗೊಳ್ಳಲು ಆಗುತ್ತಿಲ್ಲವೆಂದು ತಿಳಿಸಿರುತ್ತಾರೆ. ದೂರುದಾರರು ಹಾಜರುಪಡಿಸಿದ 2 ಫೋಟೋಗಳನ್ನು

ಪರಿಶೀಲಿಸಿದಾಗ ಹಳೆಯ ಕಟ್ಟಡದ ಪಕ್ಕದಲ್ಲಿ ಚರಂಡಿ ಇರುವುದು ಸ್ಪಷ್ಟವಾಗಿ ಕಾಣುತ್ತದೆ. ಇನ್ನೊಂದು ಫೋಟೋದಲ್ಲಿ ಹೊಸ ಕಟ್ಟಡವನ್ನು ಕಟ್ಟುತ್ತಿರುವುದು ಕಂಡುಬರುತ್ತದೆ. ಪಕ್ಕದಲ್ಲಿ ಚರಂಡಿಯ ಜಾಗದಲ್ಲಿ ಕಲ್ಲು ಮಣ್ಣು ಹಾಕಿ ಚರಂಡಿಯನ್ನು ಮುಚ್ಚಿ ಹಾಕಿದಂತೆ ಕಂಡುಬರುತ್ತದೆ. ಎದುರುದಾರರು ಯರಗುಂಟಪ್ಪ ಹೊಸದಾಗಿ ಮನೆ ಕಟ್ಟುತ್ತಿದ್ದಾರೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಎದುರುದಾರರು ಯರಗುಂಟಪ್ಪ ಅವರಿಗೆ ತಾನು ಅನುಮತಿಯನ್ನು ಕೂಡ ನೀಡಿಲ್ಲವೆಂದು ಹೇಳಿರುತ್ತಾರೆ, ಪಂಚಾಯತಿ ಅಧ್ಯಕ್ಷರ ಜೊತೆಗೆ ಸ್ಥಳಕ್ಕೆ ಭೇಟಿ ನೀಡಿ ಯರಗುಂಟಪ್ಪ ಅವರಿಗೆ ದೂರಿನ ವಿಚಾರವನ್ನು ತಿಳಿಸಿ, ಅಕ್ಕಪಕ್ಕದವರಿಗೆ ತೊಂದರೆಯಾಗಬಾರದೆಂದು ತಿಳುವಳಿಕೆ ನೀಡಿರುವುದಾಗಿ ಹೇಳಿರುತ್ತಾರೆ. ಎದುರುದಾರರ ಪ್ರಕಾರ ಪಂಚಾಯತಿಯ ದಾಖಲೆಗಳಲ್ಲಿ ನಿವೇಶನಗಳ ಉದ್ದಳತೆ ಮತ್ತು ಚೆಕ್ಕಬಂದಿಯ ಮಾಹಿತಿ ಲಭ್ಯವಿರುವುದಿಲ್ಲವೆಂದು ಹೇಳಿರುತ್ತಾರೆ. ಪಂಚಾಯತಿಯಲ್ಲಿ ಆಸ್ತಿಗಳ ಉದ್ದಳತೆ/ಚೆಕ್ಕುಬಂದಿಗಳ ಮಾಹಿತಿ ಇರದಿದ್ದರೆ ಫಲಾನುಭವಿಗಳಾಗಲೀ ಅಥವಾ ಪ್ರಸ್ತುತ ಯರಗುಂಟಪ್ಪ ಅವರಾಗಲೀ ಆಸ್ತಿಗಳ ಉದ್ದಳತೆಯನ್ನು ಗುರುತಿಸದೆ ಹೊಸದಾಗಿ ಮನೆ ಕಟ್ಟಲು ಬರುವುದಿಲ್ಲ. ಈ ರೀತಿ ಇದ್ದರೂ ಎದುರುದಾರರು ಯರಗುಂಟಪ್ಪ ಮನೆ ಕಟ್ಟುವಾಗ ಆಸ್ತಿಯ ಉದ್ದಳತೆ ಬಗ್ಗೆ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಪಂಚಾಯತಿ ಆಸ್ತಿಗಳನ್ನು ಸಂರಕ್ಷಿಸುವುದು ಎದುರುದಾರರ ಕರ್ತವ್ಯವಾಗಿರುತ್ತದೆ. ಪಂಚಾಯತಿಯಲ್ಲಿ ದಾಖಲೆಗಳು ಇರದಿದ್ದರೆ ಎದುರುದಾರರು ಮೇಲಾಧಿಕಾರಿಗಳ ಅನುಮತಿ ಪಡೆದು ಪಂಚಾಯತಿ ಆಸ್ತಿಗಳ ಉದ್ದಳತೆ ಮತ್ತು ಚೆಕ್ಕುಬಂದಿಯನ್ನು ಸಂಬಂಧಪಟ್ಟ ವಹಿಗಳಲ್ಲಿ ನಮೂದಿಸಲು ಕ್ರಮಕೈಗೊಳ್ಳಬೇಕಾಗುತ್ತದೆ. ಎದುರುದಾರರು ಹಾಜರುಪಡಿಸಿದ ಯರಗುಂಟಪ್ಪನ ಖಾತೆ ನಕಲಿನಲ್ಲಿಯೂ ಸಹ ಉದ್ದಳತೆ ಮತ್ತು ಚೆಕ್ಕುಬಂದಿಯ ನಮೂದಿರುವುದಿಲ್ಲ. ಉದ್ದಳತೆ ಮತ್ತು ಚೆಕ್ಕುಬಂದಿಯ ಮಾಹಿತಿ ಪಂಚಾಯತಿಯಲ್ಲಿ ಇರದೇ ಇದ್ದರೆ ಯಾರ ಆಸ್ತಿ ಎಷ್ಟು ವಿಸ್ತೀರ್ಣದ್ದು ಇದೆ ಎಂದು ಹೇಳಲು ಬರುವುದಿಲ್ಲ. ಈ ಬಗ್ಗೆ ಎದುರುದಾರರು ಕ್ರಮವಹಿಸದಿರುವುದನ್ನು ನೋಡಿದರೆ, ಎದುರುದಾರರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷತೆಯನ್ನು ತೋರಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಸದರಿ ಯರಗುಂಟಪ್ಪ ತಮ್ಮ ಸ್ವಂತ ಖರ್ಚಿನಲ್ಲಿ ಹೊಸದಾಗಿ ಚರಂಡಿ ನಿರ್ಮಿಸಿದ ಬಗ್ಗೆ ಯಾವುದೇ ಫೋಟೋವನ್ನು ಎದುರುದಾರರು ಹಾಜರುಪಡಿಸಿರುವುದಿಲ್ಲ.

ಆದರೆ ದೂರುದಾರರು ಹಾಜರುಪಡಿಸಿದ ಫೋಟೋವನ್ನು ಪರಿಶೀಲಿಸಿದಾಗ ಯರಗುಂಟಪ್ಪ ಚರಂಡಿಯನ್ನು ಮುಚ್ಚಿಹಾಕಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಎದುರುದಾರರು ಚರಂಡಿಯಲ್ಲಿ ನೀರು ಸರಾಗವಾಗಿ ಹರಿದುಹೋಗುವಂತೆ ನೋಡಿಕೊಳ್ಳುವ ಕರ್ತವ್ಯವನ್ನು ಹೊಂದಿರುತ್ತಾರೆ. ಈ ಬಗ್ಗೆ ತಮ್ಮ ಕರ್ತವ್ಯ ನಿಬಾಯಿಸಿದ ಬಗ್ಗೆ ಯಾವುದೇ ಪುರಾವೆಗಳನ್ನು ಒದಗಿಸಿರುವುದಿಲ್ಲ. ಎದುರುದಾರತರು ಯರಗುಂಟಪ್ಪ ಅವರಿಗೆ ಮನೆ ಕಟ್ಟಲು ಅನುಮತಿ ನೀಡದಿದ್ದರೂ ಸಹ, ಚರಂಡಿ ಒತ್ತುವರಿ ಮಾಡಿ ಮನೆ ಕಟ್ಟುತ್ತಿರುವುದರ ವಿರುದ್ಧ ಯಾವುದೇ ಕ್ರಮಕೈಗೊಂಡಿರುವುದಿಲ್ಲ.

6. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಪಾವಗಡ ತಾಲ್ಲೂಕು, ಅರಸೀಕೆರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಖಾತೆ ಸಂ.62/104, 105 ರಲ್ಲಿ **ಯರಗುಂಟಪ್ಪ ಅವರು ಮನೆ ಕಟ್ಟುವುದರ ಮೂಲಕ ತಡೆಯೊಡ್ಡಿರುವ ಚರಂಡಿಯನ್ನು ಪುನರ್ ನಿರ್ಮಿಸಿ, ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯನ್ನು ನಿವಾರಿಸಲು,** ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ **ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

N. Anand 15/3

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

15/3